**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.592/2008

| | |
|---|---|
| ಸಾಕ್ಷಿದಾರರ ಹೆಸರು | ಕೆ ಎಸ್ ಮಹೇಶ್ |
| ತಂದೆಯ ಹೆಸರು | ಲೇಟ್ ಕೆ. ಎನ್ ಸೋಮಶೇಖರ್ |
| ವಯಸ್ಸು | 48 ವರ್ಷ |
| ವೃತ್ತಿ | ಅಬಕಾರಿ ಉಪನಿರೀಕ್ಷಕರು ಬೆಂಗಳೂರು |
| ವಿಳಾಸ | ಬೆಂಗಳೂರು |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 09.04.2026 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ನಾನು 05.01.2005 ರಿಂದ 21.10.2009 ರವರೆಗೂ ಕನಕಪುರ ವಲಯದಲ್ಲಿ ಅಬಕಾರಿ ಉಪನಿರೀಕ್ಷಕನಾಗಿ ನನ್ನ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ.

ಆರೋಪಿತರನ್ನು ನಾನು ನೋಡಿರುತ್ತೇನೆ. ಪ್ರಸ್ತುತ ಪ್ರಕರಣದಲ್ಲಿ 1ನೇ ಆರೋಪಿ ಹಾಜರಿದ್ದು 2 ಮತ್ತು 3ನೇ ಆರೋಪಿ ತೀರಿಕೊಂಡಿರುತ್ತಾರೆ.

ದಿಃ 19.09.2005 ರಂದು ನನಗೆ ಬಂದ ಖಚಿತ ಮಾಹಿತಿಯ ಆಧಾರದ ಮೇರೆಗೆ ಪಂಚರಾದ ಚಾಸಾ-2 ಮತ್ತು 3 ರವರನ್ನು ಕರೆದುಕೊಂಡು ಸಿಬ್ಬಂದಿಗಳಾದ ಚಾಸಾ-4 ಮತ್ತು 5 ರವರ ಜೊತೆ ಬಿಜ್ಜಹಳ್ಳಿ ತಾಂಡ್ಯ ಬಳಿ ಗಸ್ತಿನಲ್ಲಿದ್ದಾಗ ಬೆಳಿಗ್ಗೆ ಸುಮಾರು 9.15 ಗಂಟೆ ಸಮಯದಲ್ಲಿ ಇಬ್ಬರು ಅಸಾಮಿಗಳು ವೇಗವಾಗಿ ದ್ವಿಚಕ್ರ ವಾಹನವನ್ನು ಚಾಲನೆ ಮಾಡಿಕೊಂಡು ಬರುತ್ತಿದ್ದರು. ಸಮವಸ್ತ್ರದಲ್ಲಿದ್ದ

ನಮ್ಮನು ಕಂಡು ಅವರುಗಳು ಓಡಿ ಹೋಗಲು ಪ್ರಯತ್ನ ಮಾಡಿರುತ್ತಾರೆ. ನಮ್ಮ ಸಿಬ್ಬಂದಿಗಳು ಅವರನ್ನು ಹಿಡಿದಿದ್ದು ಯಾವ ಕಾರಣಕ್ಕೆ ಓಡಿ ಹೋಗುತ್ತಿದ್ದರು ಎಂದು ವಿಚಾರಣೆ ಮಾಡಿದಾಗ ಅವರುಗಳು ಸೇಂದಿಯನ್ನು ಸಾಗಾಣಿಕೆ ಮಾಡುತ್ತಿದ್ದರು ಎಂದು ಆ ಕಾರಣದಿಂದ ನಮ್ಮನ್ನು ನೋಡಿ ಹೆದರಿಕೊಂಡು ಓಡಲು ಪ್ರಯತ್ನ ಮಾಡಿರುತ್ತಾರೆಂದು ತಿಳಿಸಿದರು. ಅದರಲ್ಲಿ ಒಬ್ಬ ಅಸಾಮಿ ಶ್ರೀನಿವಾಸ ಬಿನ್ ಹನುಮಂತೇಗೌಡ, ಬನ್ನಹಳ್ಳಿ ಗ್ರಾಮ, ಇನ್ನೊಬ್ಬ ಕಾಳೀಯಪ್ಪ ಬಿನ್ ರಾಮಸ್ವಾಮಿ ಅರಳಿಮರದೊಡ್ಡಿ ಎಂದು ತಿಳಿಸಿರುತ್ತಾರೆ

ಅವರು ಬಿಟ್ಟಂತಹ ವಾಹನವನ್ನು ನೋಡಲಾಗಿ ಅವುಗಳ ಸಂಖ್ಯೆ ಕೆಎ-05-ವೈ-2097 ಹಾಗೂ ಕೆಎ-04-ಇಇ-968 ಆಗಿರುತ್ತವೆ. ಸದರಿ ಎರಡು ವಾಹನಗಳ ಮುಂಭಾಗದಲ್ಲಿ ತಲಾ 20 ಲೀಟರ್ ನ ಕ್ಯಾನುಗಳಲ್ಲಿ ಒಟ್ಟು 80 ಲೀಟರ್ ನಷ್ಟು ಅಂದರೆ ತಲಾ 40 ಲೀಟರ್ ನಷ್ಟು ಸೇಂದಿಯನ್ನು ಇರಿಸಿದ್ದರು. ಈ ಸಂಬಂಧ ಸದರಿ ಅಸಾಮಿಗಳ ಬಳಿ ಯಾವುದೇ ಪರವಾನಿಗೆ ಇಲ್ಲವೆಂದು ತಿಳಿಸಿರುತ್ತಾರೆ. ನಂತರ ಎಫ್ ಎಸ್ ಎಲ್ ಸಂಬಂಧ ಮಾದರಿ ತೆಗೆದು 750 ರಂತೆ 2 ಬಾಟಲಿಗಳನ್ನು ತೆಗೆದಿರಿಸಲಾಯಿತು. ಅವುಗಳನ್ನು ಬಟ್ಟೆಯ ಮೂಲಕ ಕಟ್ಟಿ ಸೀಲ್ ಹಾಕಿ ಪಂಚರ ಸಮಕ್ಷಮ ವಾಹನಗಳು, ಸೇಂದಿಯನ್ನು ಜಪ್ತು ಪಡಿಸಿಕೊಂಡಿದ್ದು ಸುಮಾರು 9.20 ರಿಂದ 9.30 ಗಂಟೆಯವರೆಗೂ ಮಹಜರ್ ಮಾಡಲಾಗಿರುತ್ತದೆ. ನಂತರ ಅಮಾನತು ಪಡಿಸಿಕೊಂಡ ವಸ್ತುಗಳು ಹಾಗೂ ಅಸಾಮಿಗಳನ್ನು ಠಾಣೆಗೆ ಕರೆದುಕೊಂಡು ಹೋಗಲಾಯಿತು.

ನಂತರ ನಮ್ಮ ಠಾಣೆಗೆ ಬಂದು ಈ ಸಂಬಂಧ ಪ್ರ ವವ ದಾಖಲು ಮಾಡಿ ಸದರಿ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇವೆ. ನಂತರ ಸದರಿ ಮಾದರಿಗಳ್ನು ರಾಸಾಯನಿಕ ವಿಶ್ಲೇಷಣಾ ವರದಿ ಕೋರಿ ದಿಃ01.10.2005 ರಂದು ಚಾಸಾ-6 ರವರಿಗೆ ಕೊಟ್ಟು ಬರಲು ಹಸ್ತಾಂತರಿಸಲಾಗಿದೆ. ನಂತರ ದಿಃ14.10.2005 ರಂದು ಈ ಸಂಬಂಧ ಬಂದ ವರದಿಯನ್ನು ಕಡತಕ್ಕೆ

ಅಳವಡಿಸಿಕೊಂಡಿರುತ್ತೇನೆ. ಸದರಿ ಸೇಂದಿಯಲ್ಲಿ ಈಥೈಲ್ ಆಲ್ಕೋಹಾಲ್ ಅಂಶ ಇರುವುದು ವರದಿಯಿಂದ ದೃಡಪಟ್ಟಿರುತ್ತದೆ. ನಂತರ ಆರೋಪಿತರ ವಿರುದ್ದ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿಗೆ ಸದರಿ ಪ್ರಕರಣದ ಮಹಜರ್ ನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದ ಪ್ರ.ವವವನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದ ರಾಸಾಯನಿಕ ಪರೀಕ್ಷೆಗೆ ಕಳುಹಿಸುವ ಕುರಿತು ನೀಡಿದ ಮನವಿ ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-3 ಎಂದು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದ ಎಫ್ ಎಸ್ ಎಲ್ ವರದಿಯನ್ನು ನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-4 ಎಂದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವ ನಾಲ್ಕು ಗಾಜಿನ ಬಾಟಲ್‌ಗಳ ನ್ನು ತೋರಿಸಲಾಗಿ ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮ-1 ರಿಂದ 4 ಎಂದು ಗುರುತಿಸಲಾಯಿತು. ಅದರಲ್ಲಿ ಮು.ಮ-1 ರ ಮೇಲೆ ಅಂಟಿಸಿರುವ ಚೀಟಿಯ ಮೇಲಿನ ಸಾಕ್ಷಿಯ ಸಹಿಯನ್ನು ಮು.ಮ-1(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ**

ನಾವು ಸದರಿ ದಿನ ಬಿಜ್ಜಹಳ್ಳಿ ತಾಂಡ್ಯದಲ್ಲಿ ಗಸ್ತಿನಲ್ಲಿದ್ದು ಎಷ್ಟು ಹೊತ್ತಿಗೆ ಗಸ್ತನ್ನು ಶುರು ಮಾಡಿರುತ್ತೇವೆಂದು ನೆನಪಿಲ್ಲ. ಪ್ರಸ್ತುತ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯೇ

ಸೇಂದಿಯನ್ನು ಸಾಗಿಸುತ್ತಿದ್ದರು ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಅವರೇ ಸಾಗಾಣಿಕೆ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಆರೋಪಿಗಳನ್ನು ಹಿಡಿದಾಗ ಅವರು ಸದರಿ ಸೇಂದಿಯನ್ನು ಎಲ್ಲಿಂದ ಎಲ್ಲಿಗೆ ಸಾಗಿಸುತ್ತಿದ್ದರು, ಎಲ್ಲಿಂದ ತಂದಿದ್ದರು ಎಂದು ನಾನು ವಿಚಾರಣೆ ಮಾಡಿರುವುದಿಲ್ಲ. ಸಾಮ್ಯಾವಾಗಿ ಮು.ಮ-1 ರಿಂದ 4 ಬಾಟಲ್ ಗಳು ಎಲ್ಲಾ ಕಡೆ ಸಿಗುವಂತಹ ವಸ್ತು ಎಂದರೆ ಸರಿಯಲ್ಲ. ಅವುಗಳನು ಕೇವಲ ಪ್ರಕರಣಕ್ಕೆ ಅನುಕೂಲವಾಗುವ ರೀತಿಯಲ್ಲಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಸದರಿ ವಾಹನಗಳು ಆರೋಪಿತರಿಗೆ ಸಂಬಂಧಪಟ್ಟ ವಾಹನಗಳು ಅಲ್ಲ ಎಂದರೆ ಸರಿಯಲ್ಲ. ಸದರಿ ಟಿ ವಿ ಎಸ್ ಬೈಕಿಗೂ ಪ್ರಸ್ತುತ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸಾಕ್ಷಿಯು ಅವರು ಅದರ ಮಾಲೀಕರಲ್ಲ ಎಂದು ನುಡಿಯುತ್ತಾರೆ. ಸದರಿ ಆರೋಪಿಯ ಯಾವುದೇ ತಪ್ಪು ಇಲ್ಲದೇ ಇದ್ದರು ಸಹಿತ ಅವರನ್ನು ಸಿಲುಕಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**